# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಮಹದೇವಪ್ಪ ವಜಂತ್ರಿ, ಹಿಂದಿನ ಕಾರ್ಯದರ್ಶಿ, ಕಾರಜೋಳ ಗ್ರಾಮ ಪಂಚಾಯತ್, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ ಹಾಲಿ ಕಾರ್ಯದರ್ಶಿ, ಬರಟಗಿ ಗ್ರಾಮ ಪಂಚಾಯತ್, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಕುರಿತು.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅ.ಸ.ಪ.ಸಂ. Compt/UPLOK/BGM-278/2010/PP, ದಿನಾಂಕ: 24.04.2018.

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 23.04.2018 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3) ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಸದಾಶಿವ ಜಿ. ದಳವಾಯಿ ಬಿನ್ ಗುರುಪಾದಪ್ಪ, ದೊಡ್ಡಿಹಳ್ಳ ಗ್ರಾಮ ಮತ್ತು ಅಂಚೆ, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು (1) ಪಾದಸಲಗಿ ಎಸ್.ಎಸ್ ಬಿಲ್ ಕಲೆಕ್ಟರ್, ಕಾರಜೋಳ ಗ್ರಾಮ ಪಂಚಾಯತ್, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ, (2) ಶ್ರೀ ಮಹದೇವಪ್ಪ ವಜಂತ್ರಿ, ಹಿಂದಿನ ಕಾರ್ಯದರ್ಶಿ, ಕಾರಜೋಳ ಗ್ರಾಮ ಪಂಚಾಯತ್, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ ಹಾಲಿ ಕಾರ್ಯದರ್ಶಿ, ಬರಟಗಿ ಗ್ರಾಮ ಪಂಚಾಯತ್, ವಿಜಯಪೂರ ತಾಲ್ಲೂಕು ಮತ್ತು ಜಿಲ್ಲೆ, (3) ಶ್ರೀಮತಿ ಚಂದ್ರವ್ವ ವೆಂಕಪ್ಪ ಉಪ್ಪಾರ, ಅಧ್ಯಕ್ಷರು, ಕಾರಜೋಳ ಗ್ರಾಮ ಪಂಚಾಯತ್, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ, (4) ಶ್ರೀ ಅಸಂಗಿ ಬಿ.ಡಿ., ಉಪಾಧ್ಯಕ್ಷರು, ಕಾರಜೋಳ ಗ್ರಾಮ ಪಂಚಾಯತ್, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ ಮತ್ತು (5) ಶ್ರೀ ನಶಿ ಜೆ.ಸಿ., ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ವಿಜಯಪೂರ (ಇನ್ನು ಮುಂದೆ '1 ರಿಂದ 5ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ 2009-10ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮತ್ತು ವಸತಿ ಯೋಜನೆಗಳಲ್ಲಿ ಅವ್ಯವಹಾರ ಮಾಡಿರುವ ಬಗ್ಗೆ ಸಲ್ಲಿಸಿದ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರ ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ವಿಜಾಪೂರ ರವರು ದಿನಾಂಕ:20.06.2011 ರಲ್ಲಿ ಫಿರ್ಯಾದುದಾರರು ವಿಜಾಪೂರ ಜಿಲ್ಲಾ ಪಂಚಾಯತ್ ಓಂಬುಡ್ಸಮನ್ ನ್ಯಾಯಾಲಯದಲ್ಲಿ ಫಿರ್ಯಾದಿ ಸಲ್ಲಿಸಿದ್ದು, ಓಂಬುಡ್ಸ್‌ಮನ್ ನ್ಯಾಯಾಲಯದ ಆದೇಶದ ಪ್ರಕಾರ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಒಟ್ಟು ರೂ.10,98,162/-ಗಳು ದುರುಪಯೋಗವಾಗಿರುತ್ತದೆಯೆಂದು ಸದರಿ ಹಣವನ್ನು ಆಗಿನ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದ 3ನೇ ಎದುರುದಾರರು, ಕಾರ್ಯದರ್ಶಿಯಾಗಿದ್ದ 2ನೇ ಎದುರುದಾರರು, ಅಭಿಯಂತರರಾಗಿದ್ದ 5ನೇ ಎದುರುದಾರರು ಇವರಿಂದ ವಸೂಲಿ ಮಾಡಲು ಆದೇಶವಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ.

ಪ್ರಕರಣದ ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಆಧಾರಗಳಿಂದ 2 ರಿಂದ 4ನೇ ಎದುರುದಾರರುಗಳು ತಮ್ಮ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆಯನ್ನು ಪರಿಪಾಲಿಸದೆ ಕರ್ತವ್ಯ ಲೋಪವೆಸಗಿದ್ದು, ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966 ರ ನಿಯಮ 3(1)(ii) ಮತ್ತು (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 2ನೇ ಎದುರುದಾರರಾದ ಶ್ರೀ ಮಹದೇವಪ್ಪ ವಜಂತ್ರಿ, ಹಿಂದಿನ ಕಾರ್ಯದರ್ಶಿ, ಕಾರಜೋಳ ಗ್ರಾಮ ಪಂಚಾಯತ್, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ ಹಾಲಿ ಕಾರ್ಯದರ್ಶಿ, ಬರಟಗಿ ಗ್ರಾಮ ಪಂಚಾಯತ್, ವಿಜಯಪೂರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14(ಎ) ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ ಶಿಫಾರಸ್ಸು ಮಾಡಿರುತ್ತಾರೆ.

......2